APRIL 07, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

**<><><>**

**'ಆರೋಗ್ಯಕ್ಕಾಗಿ ಜೊತೆಗೂಡಿ;** ವಿಜ್ಞಾನದ ಜೊತೆ ನಿಲ್ಲಿ', ಧ್ಯೇಯದೊಂದಿಗೆ, ಇಂದು, ವಿಶ್ವ ಆರೋಗ್ಯ ದಿನಾಚರಣೆ.

<><><>

**ಆರೋಗ್ಯ ವ್ಯವಸ್ಥೆ ಬಲಪಡಿಸಲು** ಹಾಗೂ ಪ್ರತಿಯೊಬ್ಬರ ಯೋಗಕ್ಷೇಮಕ್ಕೆ ಆದ್ಯತೆ ನೀಡಲು, ಒಟ್ಟಾಗಿ ಶ್ರಮಿಸೋಣ ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ, ಕರೆ ನೀಡಿದ್ದಾರೆ.

<><><>

**ಗ್ರಾಮೀಣಾಭಿವೃದ್ಧಿ ಹಾಗೂ** ಪಂಚಾಯಿತಿ ರಾಜ್ ಇಲಾಖೆ, ರಾಜ್ಯದ ಸಮಸ್ತ ಜನತೆಗೆ, ವಿಶ್ವ ಆರೋಗ್ಯ ದಿನದ ಶುಭಾಶಯ ಕೋರಿದೆ. ಗ್ರಾಮೀಣ ಜನರ ಆರೋಗ್ಯ ಸುಧಾರಣೆಗೆ, ಗ್ರಾಮಗಳ ಸ್ವಚ್ಛತೆ ಮತ್ತು ವೈದ್ಯಕೀಯ ತಪಾಸಣೆ ನಿರಂತರ ನಡೆಸಲಾಗುತ್ತಿದೆ. ಉತ್ತಮ ಜೀವನಶೈಲಿಯನ್ನು ಅಳವಡಿಸಿಕೊಳ್ಳಲು, ಮಾರ್ಗದರ್ಶನ ನೀಡಲಾಗುತ್ತಿದೆ, ಎಂದು ತಿಳಿಸಿದೆ.

<><><>

**ವಿಶ್ವ ಆರೋಗ್ಯ ದಿನದ ಹಿನ್ನೆಲೆ,** ಖ್ಯಾತ ಮನೋಆರೋಗ್ಯ ತಜ್ಞ, ಬೆಂಗಳೂರಿನ, ಪದ್ಮಶ್ರೀ, ಡಾಕ್ಟರ್ ಸಿ.ಆರ್. ಚಂದ್ರಶೇಖರ, ಕಲ್ಯಾಣ ಹಾಗೂ ಕಿತ್ತೂರು ಕರ್ನಾಟಕ ಭಾಗದ, ಸಹಸ್ರಾರು ವಿದ್ಯಾರ್ಥಿಗಳನ್ನುದ್ದೇಶಿಸಿ, 'ವಿದ್ಯಾರ್ಥಿಗಳ ಮನೋ ಆರೋಗ್ಯ' ಕುರಿತು, ಆನ್ಲೈನ್‌ನಲ್ಲಿ ಇಂದು ಬೆಳಗ್ಗೆ

11.15 ರಿಂದ 12.30ರ ವರೆಗೆ, ವಿಶೇಷ ಉಪನ್ಯಾಸ ನೀಡುತ್ತಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ಡಾಕ್ಟರ್ ಸಿ.ಆರ್.ಸಿ., ಮನೋಆರೋಗ್ಯದ ಕುರಿತು, ತಮ್ಮ ಅನಿಸಿಕೆ ವ್ಯಕ್ತಪಡಿಸಿದ್ದಾರೆ.

<><><>

**ಡಾ. ಸಿ.ಆರ್. ಚಂದ್ರಶೇಖರ ಧ್ವನಿ (38) ಸೆಕೆಂದುಗಳು**

<><><>

**ರಾಷ್ಟ್ರೀಯ ಆರೋಗ್ಯ ಮಿಷನ್ ಯೋಜನೆ ಅಡಿ,** ಕೇಂದ್ರ ಸರ್ಕಾರ, ಗರ್ಭಕಂಠದ ಕ್ಯಾನ್ಸರ್ ತಡೆಯಲು, 14 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ, ಹೆಚ್.ಪಿ.ವಿ– ಹ್ಯೂಮನ್ ಪ್ಯಾಪಿಲೋಮಾ ವೈರಸ್ ಲಸಿಕೆಯನ್ನು, ಉಚಿತವಾಗಿ ನೀಡುತ್ತಿದೆ ಎಂದು, ಚಿಕ್ಕಬಳ್ಳಾಪುರ ಸಂಸದ ಡಾಕ್ಟರ್ ಕೆ.ಸುಧಾಕರ ತಿಳಿಸಿದ್ದಾರೆ. ಚಿಕ್ಕಬಳ್ಳಾಪುರದ, ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ, ನಾಲ್ಕು ಸಾವಿರ ರೂಪಾಯಿ ಮೌಲ್ಯದ, ಉಚಿತ, ಹೆಚ್.ಪಿ.ವಿ. ಲಸಿಕೆ ನೀಡಿಕೆ ಅಭಿಯಾನಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು.

<><><>

**ರಾಜ್ಯದ ಗ್ರಾಮ ಸರ್ಕಾರಗಳು, ಕ್ರಿಯಾಶೀಲವಾಗಿ,** ತಮ್ಮದೇ ವಿಶಿಷ್ಟ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದು, ಪ್ರೇರಣಾದಾಯಿ ಕಾರ್ಯ ಮಾಡುತ್ತಿವೆ ಎಂದು, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ, ಪ್ರಿಯಾಂಕ ಖರ್ಗೆ, ಶ್ಲಾಘಿಸಿದ್ದಾರೆ. ಬೆಳಗಾವಿ ಜಿಲ್ಲೆ, ಸವದತ್ತಿ ತಾಲೂಕು, ಹೂಲಿ ಗ್ರಾಮ ಪಂಚಾಯಿತಿ, "ಕುಮಾರಿ ಸಮೃದ್ಧಿ" ಯೋಜನೆ ಅಡಿ, 5 ಸಾವಿರದ 500 ರೂಪಾಯಿ ಹೆಣ್ಣು ಮಗುವಿನ ಹೆಸರಲ್ಲಿ ಠೇವಣಿ ಇಟ್ಟು, ಗ್ರಾಮದ ಹೆಣ್ಣು ಮಕ್ಕಳ ಭವಿಷ್ಯಕ್ಕೆ ನೆರವಾಗಲು, ಆರ್ಥಿಕ ಭದ್ರತೆ ಒದಗಿಸುತ್ತಿದೆ. ಹೂಲಿ ಪಂಚಾಯಿತಿಯ ಈ ಮಾದರಿ ಕಾರ್ಯ, ಎಲ್ಲರಿಗೂ ಸ್ಫೂರ್ತಿ ಎಂದು, ಸಚಿವರು ಮೆಚ್ಚುಗೆ ವ್ಯಕ್ತ ಪಡಿಸಿದ್ದಾರೆ.

<><><>

**ಪೂರ್ವ ನಿಗದಿತದಂತೆ,** ಇಂದು ಪ್ರಕಟವಾಗಬೇಕಿದ್ದ, ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆ – 1ರ ಫಲಿತಾಂಶವನ್ನು, ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳ, ಉಪ ಚುನಾವಣೆ ಹಿನ್ನೆಲೆ, ಮುಂದೂಡಲಾಗಿದೆ. ಫಲಿತಾಂಶದ ಹೊಸ ದಿನಾಂಕವನ್ನು, ಶೀಘ್ರ ಪ್ರಕಟಿಸುವುದಾಗಿ, ಕರ್ನಾಟಕ ಶಾಲಾ ಪರೀಕ್ಷೆ ಹಾಗೂ ಮೌಲ್ಯನಿರ್ಣಯ ಮಂಡಳಿ, ತಿಳಿಸಿದೆ.

<><><>

**ದಾವಣಗೆರೆ ದಕ್ಷಿಣ ಹಾಗೂ** ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ, ಉಪ ಚುನಾವಣೆಯ ಬಹಿರಂಗ ಪ್ರಚಾರ, ಇಂದು ಸಂಜೆ ಅಂತ್ಯವಾಗಲಿದೆ. ನಾಡಿದ್ದು ಗುರುವಾರ, 9ನೇ ತಾರೀಖು ಮತದಾನ ನಿಗದಿಯಾಗಿದೆ. ಮೇ 4 ರಂದು, ಮತ ಎಣಿಕೆ ನಡೆಯಲಿದ್ದು, ಅಂದೇ ಫಲಿತಾಂಶ ಪ್ರಕಟಗೊಳ್ಳಲಿದೆ.

<><><>

**ದಾವಣಗೆರೆ ಹಾಗೂ ಬಾಗಲಕೋಟೆ ಜಿಲ್ಲಾಡಳಿತಗಳು,** ಚುನಾವಣಾ ಆಯೋಗದ ನಿರ್ದೇಶನದಂತೆ, ಮತದಾರರ ಜಾಗೃತಿಗಾಗಿ, ಸ್ವೀಪ್ ಚಟುವಟಿಕೆ ಹಾಗೂ ಸಂಪೂರ್ಣ ಪಾರದರ್ಶಕ, ನ್ಯಾಯಯುತ, ನಿರ್ಭೀತ ಮತದಾನಕ್ಕೆ, ವ್ಯಾಪಕ ಪೂರ್ವ ಸಿದ್ಧತೆ ಹಾಗೂ ಬಿಗಿ ರಕ್ಷಣಾ ವ್ಯವಸ್ಥೆ ಕೈಗೊಂಡಿವೆ.

<><><>

**ತುಮಕೂರು ಜಿಲ್ಲೆ, ತಿಪಟೂರಿನ,** ಎ.ಪಿ.ಎಂ.ಸಿ. ಮಾರುಕಟ್ಟೆಯಲ್ಲಿ, ಕ್ವಿಂಟಾಲ್ ಕೊಬ್ಬರಿ ಬೆಲೆ, 32 ಸಾವಿರದ 218ಕ್ಕೆ ಟೆಂಡರ್ ಆಗಿ, ಈ ವರೆಗಿನ ಕೊಬ್ಬರಿ ಬೆಲೆಯಲ್ಲೇ ಹೊಸ ದಾಖಲೆ ಎನಿಸಿದೆ. ಎಳೆನೀರು ಹಾಗೂ ತೆಂಗಿನಕಾಯಿಗೆ, ನಿರೀಕ್ಷೆ ಮೀರಿದ ಬೆಲೆ ಹಾಗೂ ಬೇಡಿಕೆ ಹೆಚ್ಚಿದ್ದು, ಕೊಬ್ಬರಿ ದಾಸ್ತಾನು ಕಡಿಮೆಯಾದ ಹಿನ್ನೆಲೆ, ಬೆಲೆ ದಾಖಲೆಯ ಪ್ರಮಾಣದಲ್ಲಿ, ಏರಿಕೆ ಕಂಡಿದೆ ಎಂದು, ಬೆಳೆಗಾರರು ತರ್ಕಿಸಿದ್ದಾರೆ.

<><><>

**ರಾಜ್ಯದಲ್ಲಿ ಸದ್ಯಕ್ಕೆ,** ಸರ್ಕಾರಿ ಸಾರಿಗೆ ಬಸ್ ಪ್ರಯಾಣ ದರ ಏರಿಸುವುದಿಲ್ಲ; ಆಟೋ ಗ್ಯಾಸ್ ಸೇರಿ, ಪೆಟ್ರೋಲಿಯಂ ಉತ್ಪನ್ನಗಳ ಅಭಾವ ಸರಿ ಪಡಿಸುವಂತೆ, ಕೇಂದ್ರದ ಮೇಲೆ, ಒತ್ತಡ ಹೇರಲಾಗುತ್ತಿದೆ ಎಂದು, ಸಾರಿಗೆ ಖಾತೆ ಸಚಿವ ರಾಮಲಿಂಗಾರೆಡ್ಡಿ, ತಿಳಿಸಿದ್ದಾರೆ.

<><><>

**ಧಾರವಾಡದ ಸೇಂಟ್ ಜೋಸೆಫ್ ಪ್ರೌಢ ಶಾಲೆಯ,** 1993ನೇ ಸಾಲಿನ, ಹಿರಿಯ ವಿದ್ಯಾರ್ಥಿಗಳು ಸಂಗ್ರಹಿಸಿದ, 1 ಲಕ್ಷ 10 ಸಾವಿರದ 602 ರೂಪಾಯಿ ಮೊತ್ತದ ಚೆಕ್ ಅನ್ನು, ಶಾಲೆಯಲ್ಲಿ ಸ್ಮಾರ್ಟ್ ಬೋರ್ಡ್ ಹಾಗೂ ಕ್ಯಾಮರಾ ಅಳವಡಿಕೆಗಾಗಿ, ಫಾದರ್ ಅಲಾಮ್ಮ ಸ್ಲೇವ್ ರೆಡ್ಡಿ ಅವರಿಗೆ, ಕಬೀರ್ ನದಾಫ್ ಹಸ್ತಾಂತರಿಸಿದರು.

<><><>

**ಭಾರತದ ಪವನ ಶಕ್ತಿ ವಲಯ,** ಐತಿಹಾಸಿಕ ಮೈಲಿಗಲ್ಲನ್ನು ಸಾಧಿಸಿದೆ. ಸ್ವಚ್ಛ ಇಂಧನ ನಾಯಕತ್ವ ಮತ್ತು ಸುಸ್ಥಿರ ಬೆಳವಣಿಗೆಯತ್ತ, ಭಾರತದ ಪಯಣದಲ್ಲಿ, ಇದೊಂದು ಮಹತ್ವದ ಹೆಜ್ಜೆ. 2025–26ರ

ಹಣಕಾಸು ವರ್ಷದಲ್ಲಿ, 6 ದಶಾಂಶ 0–5 ಗಿಗಾ ವ್ಯಾಟ್ ಪವನ ಶಕ್ತಿ ಸಾಮರ್ಥ್ಯದೊಂದಿಗೆ ಕಾರ್ಯಾರಂಭಿಸಿ, ಆ ವರ್ಷಕ್ಕೆ ನಿಗದಿಪಡಿಸಲಾಗಿದ್ದ, 5 ದಶಾಂಶ 5 ಗಿಗಾ ವ್ಯಾಟ್ ಗುರಿಯನ್ನು ಮೀರಿ, ಸಾಧನೆಯಾಗಿದೆ.

<><><>

**ವಿಜ್ಞಾನ, ತಂತ್ರಜ್ಞಾನ ಮತ್ತು ನಾವಿನ್ಯತೆ ಕ್ಷೇತ್ರಗಳಲ್ಲಿ,** ಮಹತ್ವದ ಕೊಡುಗೆ ನೀಡಿದ, ವಿಜ್ಞಾನಿಗಳನ್ನು ಗುರುತಿಸಲು, ಕೇಂದ್ರ ಸರ್ಕಾರ, 'ರಾಷ್ಟ್ರೀಯ ವಿಜ್ಞಾನ ಪುರಸ್ಕಾರ' 2026ಕ್ಕೆ ನಾಮನಿರ್ದೇಶನಗಳನ್ನು ಆಹ್ವಾನಿಸಿದೆ. ವೈಜ್ಞಾನಿಕ ಹಾಗೂ ಕೈಗಾರಿಕಾ ಸಂಶೋಧನಾ ಮಂಡಳಿ ಮತ್ತು ವಿಜ್ಞಾನ ಮತ್ತು ಕೈಗಾರಿಕಾ ಸಂಶೋಧನಾ ಇಲಾಖೆ, ಮಾಹಿತಿ ನೀಡಿದ್ದು, ವಿಜ್ಞಾನ ರತ್ನ, ವಿಜ್ಞಾನ ಶ್ರೀ, ವಿಜ್ಞಾನ ಯುವ–ಶಾಂತಿ ಸ್ವರೂಪ ಭಟ್ನಾಗರ ಹಾಗೂ ವಿಜ್ಞಾನ ತಂಡ ಪುರಸ್ಕಾರಕ್ಕೆ, ನಾಮನಿರ್ದೇಶನ ಕೋರಿದೆ. ಹೆಚ್ಚಿನ ಮಾಹಿತಿಗೆ, awards.gov.in ವೀಕ್ಷಿಸಬಹುದು.

**<><><>**

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**